ಈ ದಿನ ದಿನಾಂಕ **26.03.2026** ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ ಪ್ರತಿವಾದಿಯ ಪರವಾಗಿಃ

**20.** ನಿಪಿ-**1** ಮತ್ತು **2** ರ ಮೂಲ ಪ್ರತಿ ನನ್ನ ಬಳಿ ಇದೆ. ಅದರ ಮೂಲ ಪ್ರತಿಗಳನ್ನು ನನಗೆ ನ್ಯಾಯಾಲಯದ ಮುಂದೆ ಹಾಜರು ಪಡಿಸಬಹುದು ಎಂದರೆ ಸಾಕ್ಷಿ ಅದನ್ನು ನಾನು ಬೈಲಹೊಂಗಲ ನ್ಯಾಯಾಲಯದಲ್ಲಿರುವ ಸಿಸಿ ನಂಬರ **648/2018** ಪ್ರಕರಣದಲ್ಲಿ ಹಾರಜು ಪಡಿಸಿದ್ದೇನೆ ಎನ್ನುತ್ತಾರೆ. ನಿಪಿ-**7** ತೀರ್ಪಿನಲ್ಲಿ ನಾನು ನಿಪಿ-**1** ಮತ್ತು **2** ರ ಮೂಲ ಪ್ರತಿಗಳನ್ನು ಹಾಜರು ಪಡಿಸಿದ ಬಗ್ಗೆ ನಮೂದು ಇಲ್ಲ ಎನ್ನುವುದು ನಿಜ. ನಿಪಿ-**1** ಮತ್ತು **2** ರ ದೃಢಿಕೃತ ನಕಲುಗಳನ್ನು ನಾನು ಬೈಲಹೊಂಗಲ ನ್ಯಾಯಾಲಯದಿಂದ ಪಡೆದು ಇಲ್ಲಿ ಹಾಜರು ಪಡಿಸಿದ್ದೇನೆ. ಆ ಕ್ರಿಮಿನಲ್ ಕೇಸನ ನನ್ನ ವಿಚಾರಣೆಯಲ್ಲಿ ನಿಪಿ-**1** ಮತ್ತು **2** ರ ಮೂಲ ಪ್ರತಿಗಳನ್ನು ಗುರುತಿಸಲಾಗಿಲ್ಲ ಎನ್ನುವುದು ನಿಜವಲ್ಲ. ನಿಪಿ-**1** ಮತ್ತು **2** ರ ಮೂಲ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಲ್ಲಿ ನಿಜ ಸಂಗತಿ ತಿಳಿಯುತ್ತದೆ ಎನ್ನುವ ಕಾರಣಕ್ಕಾಗಿ ನಾನು ಅದನ್ನು ಉದ್ದೇಶಪೂರ್ವಕವಾಗಿ ಹಾಜರು ಪಡಿಸಿಲ್ಲ ಎನ್ನುವುದು ನಿಜವಲ್ಲ.

**21.** ಪುಂಡಲೀಕ ಜೊರಾಪೂರ ಅವರು ತೀರಿಕೊಂಡ ನಂತರ ಅನ್ನಪೂರ್ಣಾ ಬಾರ್ ಆ್ಯಂಡ್ ರೆಸ್ಟೊರೆಂಟನ ಬಾರ್ ಲೈಸೆನ್ಸನ್ನು ಅಬಕಾರಿ ಇಲಾಖೆಯವರು ಮಂಜುಳಾ ಜೊರಾಪೂರ ಹೆಸರಿನಲ್ಲಿ ವರ್ಗಾವಣೆ ಮಾಡಿದ್ದಾರೆ ಎನ್ನುವುದು ನಿಜ. ಈ ದಾವಾ ಹಾಕುವವರೆಗೆ ಆ ಲೈಸೆನ್ಸ ಪ್ರತಿವಾದಿಯ ಹೆಸರಿನಲ್ಲಿಯೇ ಇತ್ತು ಎನ್ನುವುದು ನಿಜ. ಪ್ರತಿವಾದಿಯು ಅವಿದ್ಯಾವಂತ ಮಹಿಳೆ ಎನ್ನುವುದು ನಿಜವಲ್ಲ. ಪ್ರತಿವಾದಿಗೆ ಇಂಗ್ಲಿಷ ಭಾಷೆಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ ಎನ್ನುವುದು ನಿಜ. ಪ್ರತಿವಾದಿಯು ಆಕೆಯ ಹೆಸರಿನಲ್ಲಿ ಬಾರ್ ಲೈಸೆನ್ಸ ವರ್ಗಾವಣೆಯಾದ ನಂತರ ನನ್ನನ್ನು ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೊರೆಂಟನಲ್ಲಿ ನೌಕರ ಎಂದು ನೇಮಿಸಿದ್ದರು ಎನ್ನುವುದು ನಿಜವಲ್ಲ. ಪ್ರತಿವಾದಿಯು ನನ್ನನ್ನು ನೌಕರ ಎಂದು ನೇಮಿಸಿದ ಬಗ್ಗೆ

ಅಬಕಾರಿ ಇಲಾಖೆಗೆ ನೌಕಾನಾಮಾವನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಕೊಟ್ಟಿರಬಹುದು ಎನ್ನುತ್ತಾರೆ. ಈ ಬಗ್ಗೆ ಸಾಕ್ಷಿಗೆ ಈಗ ದಿನಾಂಕ **01.07.2013** ರ ನೌಕಾನಾಮಾದ ದೃಢಿಕೃತ ನಕಲನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಕೊಟ್ಟಿರಬಹುದು ಎಂದು ಹೇಳುತ್ತಾರೆ. ಆ ದೃಢಿಕೃತ ನಕಲನ್ನು ನಿಡಿ-**1** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಆತ ಈ ನ್ಯಾಯಾಲಯದ ಮುಂದೆಇದ್ದಂತಹ ಸಿವಿಲ್ ಮಿಸಲೇನಿಯಸ್ ನಂಬರಃ **49/2022** ರ ಆರ್ ಡಬ್ಲ್ಯೂ-**1** ಸಾಕ್ಷಿ ಹೇಳಿಕೆಯ ದೃಢಿಕೃತ ನಕಲನ್ನು ತೋರಿಸಿದಾಗ ಸಾಕ್ಷಿಯು ನಾನು ಆ ರೀತಿ ಸಾಕ್ಷಿ ಹೇಳಿಕೆ ಕೊಟ್ಟಿದ್ದೆ ಎಂದು ಒಪ್ಪುತ್ತಾರೆ. ಆ ಸಾಕ್ಷಿ ಹೇಳಿಕೆಯ ದೃಢಿಕೃತ ನಕಲನ್ನು ನಿಡಿ-**2** ಎಂದು ಗುರುತಿಸಲಾಯಿತು. ಪ್ರತಿವಾದಿಯು ನನ್ನೊಂದಿಗೆ ದಿನಾಂಕ **03.07.2012** ರಂದು ಯಾವುದೇ ಬಾಡಿಗೆ ಕರಾರನ್ನು ಮಾಡಿಲ್ಲ ಎನ್ನುವುದು ನಿಜವಲ್ಲ.

**22.** ನಾನು ಅಬಕಾರಿ ಇಲಾಖೆಗೆ ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೋರೆಂಟನ ಲಿಜ್ ಹೊಲ್ಡರ್ ಇದ್ದೇನೆ ಮತ್ತು ನಾನು ಅದರಲ್ಲಿ ನೌಕರ ಅಲ್ಲ ಎಂದು ಯಾವುದೇ ಪತ್ರವನ್ನು ಕೊಟ್ಟಿಲ್ಲ. ಪ್ರತಿವಾದಿಯ ಅವಿದ್ಯಾವಂತತೆಯನ್ನು ನಾನು ದುರುಪಯೋಗ ಪಡಿಸಿಕೊಂಡು ನಿಪಿ-**2** ರ **4** ನೇ ಪುಟದಲ್ಲಿ ಆಕೆಯ ಸಹಿಯನ್ನು ನಾನು ಫೋರ್ಜರಿ ಮಾಡಿದ್ದೇನೆ ಎನ್ನುವುದು ನಿಜವಲ್ಲ. ನಿಪಿ-**2** ರ ಎಲ್ಲಾ ಪುಟಗಳ ಮೇಲೆ ಪ್ರತಿವಾದಿಯ ಸಹಿ ಇರುವುದಿಲ್ಲ. ಆಕೆಯ ಸಹಿಯನ್ನು ನಿಪಿ-**2** ರ ಎಲ್ಲಾ ಪುಟಗಳಲ್ಲಿ ಪಡೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ-**2** ರ ಬಗ್ಗೆ ನಾನು ಅಬಕಾರಿ ಇಲಾಖೆಗೆ ಮಾಹಿತಿ ಕೊಟ್ಟಿಲ್ಲ. ನಿಪಿ-**2** ರ ಸಾಕ್ಷಿದಾರರನ್ನು ನಾನು ಈ ದಾವೆಯಲ್ಲಿ ಸಾಕ್ಷಿ ವಿಚಾರಣೆ ಮಾಡುವುದಿಲ್ಲ. ನಿಪಿ-**2** ಒಂದು ಖೊಟ್ಟಿ ದಾಖಲೆ ಆಗಿರುವ ಕಾರಣ ಅದರ ಸಾಕ್ಷಿದಾರರು ನ್ಯಾಯಾಲಯಕ್ಕೆ ಬರಲು ಸಿದ್ಧರಿಲ್ಲ ಮತ್ತು ಆ ಕಾರಣದಿಂದಾಗಿ ನಾನು ಅವರ ಸಾಕ್ಷಿ ವಿಚಾರಣೆ ಮಾಡಿಸುವುದಿಲ್ಲ ಎನ್ನುವುದು ನಿಜವಲ್ಲ. ನಿಪಿ-**2** ರಲ್ಲಿ ಸಾಕ್ಷಿದಾರರ ಪೂರ್ತಿ ಹೆಸರು, ವಿಳಾಸ ಮತ್ತು ಫೋನ್ ನಂಬರನ್ನು ಬರೆಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಆಗ ಅದರ ಮಾಹಿತಿ ಇರಲಿಲ್ಲ

ಎನ್ನುತ್ತಾರೆ. ನಿಪಿ-2 ಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವ ಸಾಕ್ಷಿದಾರರು ಅಸ್ಥಿತ್ವದಲ್ಲಿಯೇ ಇಲ್ಲ ಎನ್ನುವುದು ನಿಜವಲ್ಲ.

**23.** ನಿಪಿ-2 ರಲ್ಲಿ ನಾನು ಪ್ರತಿವಾದಿಗೆ ರೂ.15,00,000/- ಹಣವನ್ನು ಡಿಪಾಜಿಟ್ ಆಗಿ ಕೊಟ್ಟಿದ್ದೇನೆ ಎಂದು ಬರೆಸಿಲ್ಲ. ನನ್ನ ಬಳಿ ಆ ಕಾಲಕ್ಕೆ ರೂ.15,00,000/- ಹಣ ಇತ್ತು ಎಂದು ತೋರಿಸಲು ದಾಖಲೆಗಳು ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಅದನ್ನು ನೋಡಬೇಕು ಎನ್ನುತ್ತಾರೆ. ಆ ದಾಖಲೆಗಳು ಇದ್ದಲ್ಲಿ ನಾನು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಸಾಕ್ಷಿ ನಾನು ಕೆಲವೊಂದು ದಾಖಲೆಗಳನ್ನು ಈಗಾಗಲೇ ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ನಾನು ಪ್ರತಿವಾದಿಯ ಕೈಕೆಳಗೆ ನೌಕರನಾಗಿದ್ದ ಕಾರಣ ಸಂಬಳ ಹೊರತು ಪಡಿಸಿ ನನಗೆ ಬೇರೆ ಯಾವುದೇ ಆದಾಯ ಇರಲಿಲ್ಲ ಎನ್ನುವುದು ನಿಜವಲ್ಲ. ನಾನು ಪ್ರತಿವಾದಿಗೆ ಆ ರೂ. 15,00,000/- ನ್ನು ನಗದಾಗಿ ಕೊಟ್ಟಿದ್ದೇನೆ ಎಂದು ಹೇಳುತ್ತೇನೆ. ನಾನು ಪ್ರತಿವಾದಿಗೆ ರೂ.15,00,000/- ಕೊಟ್ಟ ಬಗ್ಗೆ ಯಾವುದೇ ರಶೀದಿ ಅಥವಾ ಹಿಂಬರಹ ಪಡೆದುಕೊಂಡಿಲ್ಲ. ನಿಪಿ-2 ಆಗಿದೆ ಎಂದು ಹೇಳುವ ಕಾಲಕ್ಕೆ ಲಿಕ್ಕರ್ ಲೈಸೆನ್ಸ ಫೀ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ಆ ಲಿಕ್ಕರ್ ಲೈಸೆನ್ಸ ಫೀಯನ್ನು ಪಾವತಿಸಿದ ರಶೀದಿ ಪ್ರತಿವಾದಿಯ ಹೆಸರನಲ್ಲಿಯೇ ಇದೆ ಎಂದರೆ ಸಾಕ್ಷಿ ಇದೆ ಆದರೆ ನಾನು ಪಾವತಿಸಿದ್ದು ಎನ್ನುತ್ತಾರೆ. ಆ ಲೈಸೆನ್ಸ ಫೀಯನ್ನು ನಾನು ಕಟ್ಟಿರುವ ಬಗ್ಗೆ ಹಣವನ್ನು ಎಲ್ಲಿಂದ ತಂದಿದ್ದೆ ಎನ್ನುವುದು ನನಗೆ ನೆನಪಿಲ್ಲ.

**24.** ನಿಪಿ-2 ರ ಕಾಲಂ 5 ರಲ್ಲಿ ಬರೆದಿರುವಂತೆ ಹೊಸ ಪರ್ನಿಚರನ್ನು ಯಾವ ಅಂಗಡಿಯಿಂದ ತೆಗೆದುಕೊಂಡಿದ್ದೆ ಎಂದು ನನಗೆ ನೆನಪಿಲ್ಲ. ನಾನು ಸುಮಾರು 18 ರಿಂದ 20 ಲಕ್ಷ ರೂಪಾಯಿಯ ಪರ್ನಿಚರನ್ನು ಆಗ ತೆಗೆದುಕೊಂಡಿದ್ದೆ ಎಂದು ನಾನು ಹೇಳುತ್ತೇನೆ. ಆ ಹಣವನ್ನು ನಾನು ಎಲ್ಲಿಂದ ಪಡೆದುಕೊಂಡಿದ್ದೆ ಮತ್ತು ಯಾರಿಂದ ಅಷ್ಟು ಪರ್ನಿಚರನ್ನು ಖರೀದಿಸಿದ್ದೆ ಎಂದು ಈಗ ನನಗೆ ಹೇಳಲಾಗುವುದಿಲ್ಲ. ನಾನು ಯಾವುದೇ ಪರ್ನಿಚರನ್ನು ಖರೀದಿ ಮಾಡಿಲ್ಲ ಎನ್ನುವುದು ನಿಜವಲ್ಲ. ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೊರೆಂಟನ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಾನು ಉಳಿದ ನೌಕರರಿಗೆ

ಸಂಬಳವನ್ನು ಕೊಟ್ಟು ಬಾಕಿ ಉಳಿದ ಹಣವನ್ನು ಪ್ರತಿವಾದಿಗೆ ಕೊಡುತ್ತಿದ್ದೆ ಎಂದರೆ ಸಾಕ್ಷಿ ಬಾಡಿಗೆ ಮಾತ್ರ ಕೊಡುತ್ತಿದ್ದೆ ಎನ್ನುತ್ತಾರೆ. ಆ ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೊರೆಂಟನಲ್ಲಿ ಸುಮಾರು **15** ಮಂದಿ ನೌಕರರು ಇದ್ದರು. ಆ ನೌಕರರಿಗೆ ಸಂಬಳವನ್ನು ಆ ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೊರೆಂಟನ ವ್ಯಾಪಾರದಿಂದ ಬಂದ ಹಣದಿಂದಲೇ ಕೊಡುತ್ತಿದ್ದೆವು. ನಾನು ಬಾಕಿ ಉಳಿದ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಮೊದಲು ಹಾಕುತ್ತಿದ್ದೆ ಎನ್ನುವುದು ನಿಜ. ಆ ಬಳಿಕ ನಾನು ಆ ಹಣವನ್ನು ಪ್ರತಿವಾದಿಯ ಖಾತೆಗೆ ಹಾಕುತ್ತಿದ್ದೆ ಎನ್ನುವುದು ನಿಜ. ಸಾಕ್ಷಿ ಲಿಕ್ಕರ್ ಪಡೆಯಲು ಮಾತ್ರ ನಾನು ಹಣವನ್ನು ಪ್ರತಿವಾದಿಯ ಖಾತೆಗೆ ಹಾಕುತ್ತಿದ್ದೆ ಎನ್ನುತ್ತಾರೆ. ನಿಪಿ-**2** ರಲ್ಲಿ ಈ ರೀತಿ ಯಾವುದೇ ಬರಹ ಇರುವುದಿಲ್ಲ. ನಾನು ಪ್ರತಿವಾದಿಯ ಬ್ಯಾಂಕ್ ಖಾತೆಗೆ ವ್ಯಾಪಾರದಿಂದ ಬಂದ ಲಾಭದ ಹಣವನ್ನು ಹಾಕುತ್ತಿದ್ದೆ ಎನ್ನುವುದು ನಿಜವಲ್ಲ. ಪ್ರತಿವಾದಿಯು ನನ್ನ ಮೇಲೆ ವಿಶ್ವಾಸ ಇಟ್ಟು ನಾನು ಅಲ್ಲಿ ಮ್ಯಾನೇಜರ್ ಆಗಿದ್ದ ಕಾರಣ ಅದಕ್ಕೆ ಯಾವುದೇ ತಕರಾರು ಮಾಡುತ್ತಿರಲಿಲ್ಲ ಎನ್ನುವುದು ನಿಜವಲ್ಲ.

**25.** ಪ್ರತಿವಾದಿಯವರು ಖಾಯಂ ಆಗಿ ಗೋಕಾಕದಲ್ಲಿಯೇ ಇರುತ್ತಿದ್ದರು ಎನ್ನುವುದು ನಿಜ. ನಿಪಿ-**2** ರಲ್ಲಿ ನಾನು ಪ್ರತಿವಾದಿಯ ವಿಳಾಸವನ್ನು ಬೈಲಹೊಂಗಲ ಎಂದು ಕಾಣಿಸಿದ್ದೇನೆ ಎಂದರೆ ಸಾಕ್ಷಿ ಅದನ್ನು ಅವರೇ ಬರೆಸಿದ್ದು ಎನ್ನುತ್ತಾರೆ. ನಿಪಿ-**2** ರ ಪ್ರಕಾರ ನಾನು ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೊರೆಂಟನ ಕಟ್ಟಡ ಸಮೇತ ಬಾಡಿಗೆಗೆ ಪಡೆದಕೊಂಡಿದ್ದೆನು. ನಿಪಿ-**2** ನ್ನು ನೋಂದಣಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

**26.** ಪ್ರತಿವಾದಿಯು ಖಾಯಂ ಆಗಿ ಗೋಕಾಕನಲ್ಲಿದ್ದ ಕಾರಣ ನನ್ನ ಮೇಲೆ ವಿಶ್ವಾಸ ಇಟ್ಟು ನನ್ನನ್ನು ಮ್ಯಾನೇಜರ್ ಎಂದು ನೇಮಿಸಿ ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೊರೆಂಟನ ವ್ಯವಹಾರವನ್ನು ನನ್ನ ಮೂಲಕ ನಡೆಸುತ್ತಿದ್ದರು ಎನ್ನುವುದು ನಿಜವಲ್ಲ. ಏಪ್ರೀಲ್ **2017** ರಲ್ಲಿ ಪ್ರತಿವಾದಿಗೆ ನನ್ನ ಮೇಲೆ ಸಂಶಯ ಉಂಟಾಗಿ ಆಕೆ ನನ್ನೊಂದಿಗೆ ಚೌಕಶಿ ಮಾಡಿದ್ದರು ಎನ್ನುವುದು ನಿಜವಲ್ಲ. ಮೇ **2017** ರಲ್ಲಿ ಪ್ರತಿವಾದಿಯು ನನ್ನನ್ನು

ನೌಕರಿಯಿಂದ ತೆಗೆದು ಹಾಕಿದ್ದಳು ಎನ್ನುವುದು ನಿಜವಲ್ಲ. ಪ್ರತಿವಾದಿಯು ಅಬಕಾರಿ ಇಲಾಖೆಗೆ ಕೊಡಲು ಮತ್ತು ಸಾರಾಯಿ ಖರೀದಿ ಮಾಡಲು ಸಹಿ ಮಾಡಿದ ಖಾಲಿ ಚೆಕನ್ನು ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೊರೆಂಟನಲ್ಲಿ ಇಡುತ್ತಿದ್ದರು ಎನ್ನುವುದು ನಿಜವಲ್ಲ. ಆ ಸಹಿ ಮಾಡಿದ ಖಾಲಿ ಚೆಕ್‌ನ್ನು ದುರುಪಯೋಗ ಪಡಿಸಿಕೊಂಡು ನಾನು ಆಕೆಗೆ ರೂ.**29,00,000/-** ಹಣ ಕೊಟ್ಟಿದ್ದೇನೆ ಎಂದು ಸೃಷ್ಟಿಸಿದ್ದೇನೆ ಎನ್ನುವುದು ನಿಜವಲ್ಲ. ಆ ಸೃಷ್ಟಿಸಿದ ಚೆಕ್‌ನ ಆಧಾರದ ಮೇಲೆ ನಾನು ಬೈಲಹೊಂಗಲ ನ್ಯಾಯಾಲಯದಲ್ಲಿ ಪ್ರತಿವಾದಿಯ ವಿರುದ್ಧ ಚೆಕ್ ಬೊನ್ಸ ಕೇಸ ಹಾಕಿದ್ದೆ ಎನ್ನುವುದು ನಿಜವಲ್ಲ. ಆ ಕೇಸನಲ್ಲಿ ಪ್ರತಿವಾದಿಗೆ ಶಿಕ್ಷೆಯಾಗಿತ್ತು ಎನ್ನುವುದು ನಿಜ. ಆ ಶಿಕ್ಷೆಯ ತೀರ್ಪಿನ ವಿರುದ್ದ ಪ್ರತಿವಾದಿಯು ಬೆಳಗಾವಿಯ **10** ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದ ಮುಂದೆ ಕ್ರಿಮಿನಲ್ ಅಫೀಲ್ ನಂಬರ **180/2020** ರಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎನ್ನುವುದು ನಿಜ. ಆ ಕ್ರಿಮಿನಲ್ ಅಫೀಲ್ ಮಂಜೂರಿಯಾಗಿ ಕೆಳ ನ್ಯಾಯಾಲಯದ ತೀರ್ಪು ರದ್ದಾಗಿದೆ ಎಂದರೆ ಸಾಕ್ಷಿ ಹೌದು ಮತ್ತು ನಾನು ಅದರ ವಿರುದ್ಧ ಹೈಕೋರ್ಟಗೆ ಮೇಲ್ಮನವಿ ಸಲ್ಲಿಸಿದ್ದೇನೆ ಎನ್ನುತ್ತಾರೆ. ಆ ಮೇಲ್ಮನವಿ ಈಗ ಹೈಕೋರ್ಟನಲ್ಲಿ ಚಾಲ್ತಿಯಲ್ಲಿದೆ. ಆ ಚೆಕ್ ಬೊನ್ಸ ಕೇಸನಲ್ಲಿದ್ದಂತಹ ರೂ.**29,00,000/-** ಹಣವನ್ನು ಬಡ್ಡಿ ಸಹಿತ ವಸೂಲಿ ಮಾಡಲು ನಾನು ಈ ದಾವಾ ಸಲ್ಲಿಸಿದ್ದೇನೆ.

**27.** ದಿನಾಂಕ **03.01.2018** ರಂದು ಪ್ರತಿವಾದಿಯವರು ಬೈಲಹೊಂಗಲ ಪೋಲಿಸ ಠಾಣೆಯಲ್ಲಿ ನನ್ನ ವಿರುದ್ದ ನಾನು ಸಹಿ ಪೋರ್ಜರಿ ಮಾಡಿ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಮತ್ತು ದಾಖಲೆಗಳನ್ನು ಕಳುವು ಮಾಡಿದ್ದೇನೆ ಎಂದು ಆಪಾದಿಸಿ ದೂರು ದಾಖಲಿಸಿದ್ದರು ಎನ್ನುವುದು ನಿಜ. ಆ ಪಿರ್ಯಾದಿಯ ಬಗ್ಗೆ ನಾನು ಪೋಲಿಸರಿಗೆ ಪ್ರಭಾವ ಬೀರಿ 'ಬಿ' ರಿಪೋರ್ಟ ಸಲ್ಲಿಸುವಂತೆ ಮಾಡಿದ್ದೆ ಎನ್ನುವುದು ನಿಜವಲ್ಲ. ಆ 'ಬಿ' ರಿಪೋರ್ಟಗೆ ಪ್ರತಿವಾದಿಯು ತಕರಾರು ಹಾಕಿ ಆ ಕೇಸನ್ನು ಪುನಃ ತನಿಖೆ ಮಾಡಲು ನ್ಯಾಯಾಲಯಕ್ಕೆ ಅರ್ಜಿ ಕೊಟ್ಟಿದ್ದರು ಎನ್ನುವುದು ನಿಜ. ಆ ಬಳಿಕ ಆ ಕೇಸನಲ್ಲಿ 'ಬಿ' ರಿಪೋರ್ಟನ್ನು ರದ್ದು ಮಾಡಿ ನನ್ನ ವಿರುದ್ಧ ಕ್ರಿಮಿನಲ್ ಕೇಸ ದಾಖಲು ಮಾಡಲು ಆದೇಶವಾಗಿದೆ ಎಂದರೆ ಸಾಕ್ಷಿ ಹೌದು ನಾನು ಅದನ್ನು ಪ್ರಶ್ನಿಸಿ ಮಾನ್ಯ

ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದೇನೆ ಎನ್ನುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ಅಲ್ಲಿ ತಡೆಯಾಜ್ಞೆಯನ್ನು ನೀಡಿದ್ದು, ಆ ಪ್ರಕರಣ ಇನ್ನು ಚಾಲ್ತಿಯಲ್ಲಿದೆ. ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆ ಆದೇಶವನ್ನು ನಾನು ಪೂರ್ತಿಯಾಗಿ ಓದಿ ನೋಡಿಲ್ಲ. ಈ ದಾವೆ ಇರುವ ಕಾರಣ ಮಾನ್ಯ ಉಚ್ಚ ನ್ಯಾಯಾಲಯವು ಆ ಪ್ರಕರಣಕ್ಕೆ ತಡೆಯಾಜ್ಞೆಯನ್ನು ನೀಡಿದೆ ಎನ್ನುವುದು ನನಗೆ ಗೊತ್ತಿಲ್ಲ.

**28.** ನನಗೆ ಬ್ಯಾಂಕಿನಿಂದ ನೇರವಾಗಿ ನನ್ನ ಬ್ಯಾಂಕ್ ಖಾತೆಯನ್ನು ನಕಲನ್ನು ಪಡೆದು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾನು ಬೈಲಹೊಂಗಲ ನ್ಯಾಯಾಲಯದಲ್ಲಿ ಇದ್ದಂತಹ ಚೆಕ್ ಬೊನ್ಸ ಕೇಸನಲ್ಲಿ ಚೆಕ್ ಮತ್ತು ಬ್ಯಾಂಕ್ ಹಿಂಬರಹದ ನೋಟರಿ ದೃಢಿಕೃತ ನಕಲುಗಳನ್ನು ಹಾಜರು ಪಡಿಸಿ ಅದರ ದೃಢಿಕೃತ ನಕಲನ್ನು ಪಡೆದು ಈ ದಾವೆಯಲ್ಲಿ ಹಾಜರು ಪಡಿಸಿದ್ದೇನೆ ಎನ್ನುವುದು ನಿಜವಲ್ಲ. ನನಗೆ ಪ್ರತಿವಾದಿಯಿಂದ ಯಾವುದೇ ಹಣ ಬರಲು ಇರುವುದಿಲ್ಲ ಎನ್ನುವುದು ನಿಜವಲ್ಲ. ನಾನು ದಾಖಲಾತಿಗಳನ್ನು ಸೃಷ್ಟಿಸಿ ಇದೊಂದು ಸುಳ್ಳು ದಾವೆ ಮಾಡಿರುತ್ತೇನೆ ಎನ್ನುವುದು ನಿಜವಲ್ಲ.

**29.** ದಿನಾಂಕ **14.07.2017** ರಂದು ನನ್ನ ಮತ್ತು ಪ್ರತಿವಾದಿಯ ಮಧ್ಯೆ ಯಾವುದೇ ರೀತಿಯ ಸೆಟಲಮೆಂಟ ಆಗಿಲ್ಲ ಎಂದರೆ ಸಾಕ್ಷಿ ಆ ದಿನ ಪ್ರತಿವಾದಿಯು ಚೆಕ್ ಮಾತ್ರ ಕೊಟ್ಟಿದ್ದರು ಎನ್ನುತ್ತಾರೆ. ನಾನು ರೂ.**9,00,000/-** ಹಣವನ್ನು ಪರ್ನಿಚರ್ ಖರೀದಿ ಮಾಡಲು ಉಪಯೋಗಿಲ್ಲ ಎನ್ನುವುದು ನಿಜವಲ್ಲ. ಆ ಕಾಲಕ್ಕೆ ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೊರೆಂಟನಲ್ಲಿ ಇದ್ದಂತಹ ರೂ.**2,00,000/-** ಮೌಲ್ಯದ ಮದ್ಯ ಪ್ರತಿವಾದಿಗೆ ಸೇರಿತ್ತು ಎನ್ನುವುದು ನಿಜವಲ್ಲ. ಆ ಮದ್ಯ ನನಗೆ ಸೇರಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನಾನು ಪ್ರತಿವಾದಿಗೆ ಯಾವುದೇ ಹಣವನ್ನು ಡಿಪಾಜಿಟ್ ಆಗಿ ಕೊಟ್ಟಿಲ್ಲ ಮತ್ತು ಆ ಕಾರಣದಿಂದ ಪ್ರತಿವಾದಿಯು ನನಗೆ ಅದನ್ನು ಮರುಪಾವತಿಸಲು ಭಾದ್ಯಸ್ಥಳಲ್ಲ ಎನ್ನುವುದು ನಿಜವಲ್ಲ. ನಾನು ಪ್ರತಿವಾದಿಗೆ

ಲಕ್ಷಾಂತರ ರೂಪಾಯಿ ನಷ್ಟ ಉಂಟು ಮಾಡಿದ್ದೆ ಮತ್ತು ಆಕೆ ನನ್ನನ್ನು ನೌಕರಿಯಿಂದ ತೆಗೆದ ಕಾರಣ ನಾನು ಇದೊಂದು ಸುಳ್ಳು ದಾವಾ ಮಾಡಿದ್ದೇನೆ ಎನ್ನುವುದು ನಿಜವಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ ).

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.